# ದೇವರ ಸರ್ವವ್ಯಾಪಕತ್ವ, ಸರ್ವಜ್ಞಾನ ಹಾಗೂ ಸರ್ವಶಕ್ತಿ

ರೆಮೊಂಡ್ ಸಿ. ಕೆಲ್ಸಿ

"ದೇವರ ಅಗಾಧಗಳನ್ನು ಕಂಡುಕೊಳ್ಳ ಬಲ್ಲಿಯೋ? ಸರ್ವಶಕ್ತನನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳ ಬಹುದೋ? ಆಹಾ, (ಆತನ ಜ್ಞಾನವು) ಆಕಾಶದ ಹಾಗೆ ಉನ್ನತವಾಗಿದೆಣಿ ನೀನು ಮಾಡುವುದೇನು? ಪಾತಾಳಕ್ಕಿಂತ ಆಳವಾಗಿದೆಣಿ ನೀನು ತಿಳಿದುಕೊಳ್ಳುವುದೇನು? ಅದರ ಅಳತೆಯು ಭೂಮಿಗಿಂತಲೂ ಉದ್ದವಾಗಿದೆ, ಸಮುದ್ರಕ್ಕಿಂತಲೂ ಅಗಲವಾಗಿದೆ" (ಯೋಬ 11:7-9).

ದೇವರೊಂದಿಗೆ ಪರಿಚಿತರಾಗುವುದು ನಿತ್ಯತ್ವದಲ್ಲೆಲ್ಲಾ ನಮ್ಮ ಮನಸ್ಸುಗಳನ್ನು ತುಂಬಿಕೊಳ್ಳುತ್ತದೆ. ನಿಶ್ಚಯವಾಗಿಯೂ ವಿಷಯವನ್ನು ಪೂರ್ಣವಾಗಿ ತೀರಿಸಲಿಕ್ಕೆ ನಾವು ನಿರೀಕ್ಷಿಸಲಾರೆವು. ದೇವರು ಮಿತಿಯುಳ್ಳ ಮನಸ್ಸಿಗೆ ಅಗ್ರಾಹ್ಯನಾಗಿದ್ದಾನೆ. ಆತನು ತನ್ನನ್ನು ಮಾನವನಿಂದ ದೂರವಿಟ್ಟು ಕೊಳ್ಳಲು ಪ್ರಯತ್ನಿಸುವನೆಂದು ಅರ್ಥವಾಗುವದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಆತನು ತಿಳಿಯಲ್ಪಡಲು ಮತ್ತು ತನ್ನನ್ನು ಪ್ರಕಟಿಸಲು ಬಯಸುತ್ತಾನೆ. ದೇವರನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತು ಹೋಗುವುದು ತನ್ನನ್ನು ಪ್ರಕಟಿಸಿಕೊಳ್ಳಲು ಆತನ ಪರವಾಗಿ ಮನಸಿಲ್ಲದೇ ಇರುವಂಥದ್ದಾಗಿರುವದಿಲ್ಲ, ಆದರೆ ನಮ್ಮ ಮಿತಿಗಳು ಕಾರಣವಾಗಿವೆ. ದೇವರು ಮನುಷ್ಯನಿಗೆ ತನ್ನನ್ನು ಪ್ರಕಟಿಸಿಕೊಳ್ಳಲು ತನ್ನನ್ನು ತಗ್ಗಿಸಿಕೊಂಡದ್ದರಿಂದ, ಕೆಲವೊಂದು ಅಳತೆಗಳಲ್ಲಿ ಆತನನ್ನು ತಿಳಿಯ ಬಹುದಾಗಿದೆ. ದೇವರನ್ನು ತಿಳಿಯುವುದು ನಿತ್ಯ ಜೀವವನ್ನು ಹೊಂದುವದಾಗಿದೆ (ಯೋಹಾನ 17:3). ದೇವರ ಪರಿಪೂರ್ಣತೆಯನ್ನು ಸಂಪೂರ್ಣವಾಗಿ ಅರ್ಥಮಾಡಿ ಕೊಳ್ಳುವುದು ಅಸಾಧ್ಯವಾದದ್ದಾಗಿದ್ದರೂ ದೇವರೊಂದಿಗೆ ಚೆನ್ನಾಗಿ ಪರಿಚಯ ಮಾಡಿಕೊಳ್ಳುವುದು ನಮ್ಮ ಸತತವಾದ ಗುರಿಯಾಗಿರಬೇಕು.

ರೋಲಂಡ್ ಹಿಲ್ ಎಂಬ ಪ್ರಸಂಗಿಯು ತನ್ನ ಕೇಳುಗರಿಗೆ ದೇವರ ಪ್ರೀತಿಯ ಬಗ್ಗೆ ಕೆಲವೊಂದನ್ನು ತಿಳಿಸಲು ಪ್ರಯತ್ನಿಸುತ್ತಿದ್ದನೆಂದು ಹೇಳಲಾಗಿದೆ. ಥಕ್ಕನೇ ಅವನು ಪ್ರಸಂಗವನ್ನು ನಿಲ್ಲಿಸಿ, ತನ್ನ ಕಣ್ಣುಗಳನ್ನು ಆಕಾಶದ ಕಡೆಗೆ ಎತ್ತಿ, "ಈ ಉನ್ನತವಾದ ಮುಖ್ಯಪ್ರಸ್ತಾಪವನ್ನು ವಿವರಿಸಲು ನಾನು ಅಶಕ್ತನಾಗಿದ್ದೇನೆ. ಆದಾಗ್ಯೂ ಮಹಾಸಾಗರದಲ್ಲಿಯ ಅತೀ ಚಿಕ್ಕ ಮೀನು ಎಂದಾದರೂ ಸಾಗರದ ವಿಶಾಲತೆಯ ಬಗ್ಗೆ ದೂರಿರುವದನ್ನು ನಾನು ಯೋಚಿಸುವದಿಲ್ಲ, ನನ್ನೊಂದಿಗೂ ಇದು ಹಾಗಿದೆ. ನನ್ನ ಅಲ್ಪ ಬಲಗಳೊಂದಿಗೆ ಆನಂದದಿಂದ ಎಂದೂ ಗ್ರಹಿಸಿಕೊಳ್ಳಲು ಶಕ್ತನಾಗದ ವಿಷಯದ ಅಪರಿಮಿತವಾದದ್ದರ ಒಳಗೆ ಧುಮುಕ ಬಹುದು" ಎಂದು ಹೇಳಿದನು. ಇಂಥದೇ ಭಾವನೆಯು ಪೌಲನು ತನ್ನ ಅದ್ಭುತಕರವಾದ ಸ್ತೋತ್ರಗೀತಗಳಲ್ಲಿ ಒಂದರಲ್ಲಿ ಹೀಗೆ ಹೇಳುವವನಾದನು: "ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡು ಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!" (ರೋಮಾಪುರ 11:33).

ದೇವರ ಅನಂತ ಶಕ್ತಿಯನ್ನು ನಾವು ಅಧ್ಯಯನ ಮಾಡುವಾಗ ಇದು ನಮ್ಮ ಮನಸ್ಸಿನ

ಭಾಗವಾಗಿರ ಬೇಕು. “ನಮ್ಮ ಕರ್ತನು ದೊಡ್ಡವನೂ ಪರಾಕ್ರಮಿಯೂ ಆಗಿದ್ದಾನೆಣಿ ಆತನ ಜ್ಞಾನವು ಅಪರಿಮಿತವಾಗಿದೆ” (ಕೀರ್ತನೆ 147:5). “ಅನಂತ ಶಕ್ತಿ” ಎಂಬ ಮಾತು ಎಲ್ಲಾ ಮಿತಿಗಳು ಇಲ್ಲದಿರುವದನ್ನು ತಿಳಿಸುತ್ತದೆ. ದೇವರ ವಿಸ್ತೀರ್ಣತೆಯನ್ನು ದಾಟಿ ಯಾವುದೂ ಇರುವದಿಲ್ಲ ಆತನನ್ನು ಅಳತೆ-ಮಾಡಲಾಗದಂತೆ ಆತನು ಇರುತ್ತಾನೆ. ಆತನ ಘನತೆಗೆ ಮಿತಿಗಳನ್ನು ಕಲ್ಪಿಸಲಾಗುವದಿಲ್ಲ.

ಪ್ರೀತಿ, ದಯೆ ಮತ್ತು ನ್ಯಾಯದಂಥ ದೇವರ ಕೆಲವು ಗುಣಧರ್ಮಗಳು ಮಾನವ ಜೀವಿಗಳಲ್ಲಿ ಸಮೀಪದ ಸಾದೃಶ್ಯತೆಕಂಡು ಬರುತ್ತದೆ. ಇತರವುಗಳನ್ನು ವರ್ಣಿಸಲಿಕ್ಕೆ ಆಗುವದಿಲ್ಲ. ಆದರೆ ಕೇವಲ ಆಧ್ಯಾತ್ಮಿಕ ಗುಣಲಕ್ಷಣಗಳಿಗೆ ಮಾನವ ಮನಸ್ಸಿನಲ್ಲಿ ಯಾವುದೇ ಸಾದೃಶ್ಯತೆ ಇರುವದಿಲ್ಲ ಮತ್ತು ನಮ್ಮ ವಿವರಣಾತ್ಮಕ ಮಾತುಗಳು ಅವುಗಳನ್ನು ನಿರ್ಧರಿಸಲು ಸಾಕಷ್ಟಾದವುಗಳಾಗಿರುವದಿಲ್ಲ. ನಮಗಿರುವಂಥ ಭಾಷೆಯನ್ನು ಹಾಗೂ ನಾವು ಕಂಡು ಕೊಳ್ಳುವ ದೃಷ್ಟಾಂತಗಳನ್ನು, ಉಪಯೋಗಿಸುವದನ್ನು, ಅದೇ ಸಮಯದಲ್ಲಿ ಅವುಗಳ ಸಾಕಾಗದಿರುವಿಕೆಯನ್ನು ಜ್ಞಾಪಿಸಿಕೊಳ್ಳಬೇಕು.

## ಸರ್ವವ್ಯಾಪಕತ್ವ

“ಸರ್ವವ್ಯಾಪಕತ್ವ” ಎಂಬ ಅಂಕಿತ ನಾಮದ ಮೊದಲನೆಯ ಗುಣಲಕ್ಷಣವನ್ನು ಗಮನಿಸೋಣ. ಈ ಪದ ಪರಿಶುದ್ಧ ಬರಹಗಳಲ್ಲಿ ಬರುವದಿಲ್ಲ. ಆದರೆ ಬೈಬಲಿನಲ್ಲೆಲ್ಲಾ ದೇವರು ಎಲ್ಲಾ ಕಡೆಗಳಲ್ಲಿಯೂ ಇರುವನು ಎಂಬ ಸಂಗತಿಯು ಬೋಧಿಸಲ್ಪಟ್ಟಿದೆ ಹಾಗೂ ಮುಂದಾಗಿ ತಿಳಿಯಲ್ಪಟ್ಟಿದೆ. ಮನುಷ್ಯನಿಗೆ ಗ್ರಹಿಸುವದಕ್ಕಾಗಿ ಇದಕ್ಕಿಂತ ಪ್ರಕಟನೆಯ ಯಾವುದೇ ಭಾವನೆಯು ಹೆಚ್ಚು ಕಠಿಣವಾದದ್ದಾಗಿರುವದಿಲ್ಲ: ದೇವರ ಸರ್ವ ವ್ಯಾಪಕತ್ವ. ಆತನು ಸಮಯ ಇಲ್ಲವೇ ಸ್ಥಳಗಳಿಂದ ಮಿತಿಗೊಳಿಸಲ್ಪಟ್ಟಿರುವದಿಲ್ಲ.

ಅಸ್ತಿತ್ವದ ಎರಡು ಅಂಶಗಳನ್ನು ನಾವು ತಿಳಿದಿರುತ್ತೇವೆ: ದೇವರು ಮತ್ತು ವಿಶ್ವ. ಅದು ದೇವರನ್ನೂ ಮತ್ತು ದೇವರಲ್ಲದ ಎಲ್ಲವನ್ನೂ ಒಳಗೊಂಡಿರುತ್ತದೆ. ಸರ್ವವ್ಯಾಪಕತ್ವವು - ದೇವರೆಂಬ ಒಬ್ಬಾತನು, ಇನ್ನೊಂದು ಘಟಕದಲ್ಲಿ ಹೋಗಿ ಅದನ್ನು, ವಿಶ್ವವನ್ನು, ಅದರ ಎಲ್ಲಾ ಭಾಗವನ್ನು ತುಂಬಿಸುತ್ತಾನೆ ಎಂಬುದನ್ನು ಸೂಚಿಸುತ್ತದೆ. ದೇವರು ಎಲ್ಲಾ ಕಡೆಗಳ ಲ್ಲಿಯೂ ಇರುತ್ತಾನೆ. ಆತನ ಭಾಗವು ಪ್ರತಿಯೊಂದು ಸ್ಥಳದಲ್ಲಿರುವುದು ಎಂದರ್ಥವಲ್ಲ, ಆದರೆ ಆತನ ಸಂಪೂರ್ಣತೆಯು ಪ್ರತಿಯೊಂದು ಸ್ಥಳದಲ್ಲಿರುವುದು. ಅಥೇನೆಯಲ್ಲಿ ಅರಿಯೋಪಾಗದಲ್ಲಿಯ ತನ್ನ ಪ್ರಸಂಗದಲ್ಲಿ ಪೌಲನು, ದೇವರು “ನಮ್ಮಲ್ಲಿ ಪ್ರತಿಯೊಬ್ಬರಿಂದ ದೂರವಾಗಿರುವದಿಲ್ಲ” (ಅಪೊಸ್ತಲರ ಕೃತ್ಯ 17:27) ಎಂದು ಹೇಳಿದ್ದಾನೆ. ಭೂಲೋಕದ ಇನ್ನೊಂದು ಪಕ್ಕದಲ್ಲಿ ಒಬ್ಬ ವ್ಯಕ್ತಿಯೊಂದಿಗೆ ಸಮೀಪದಲ್ಲಿ ಹೇಗೆ ಇರುವನೋ ಹಾಗೆಯೇ ಭೂಮಿಯ ಇನ್ನೊಂದು ಪಕ್ಕದಲ್ಲಿ ನಮ್ಮೊಂದಿಗೂ ಇರುವನು. ಆತನು ಕಾರ್ಯಮಾಡಲು ಬಯಸುವ ಇಲ್ಲವೇ ಪ್ರಾರ್ಥನೆಗೆ ಉತ್ತರ ಕೊಡುವ ಯಾವುದೇ ಸ್ಥಳಕ್ಕೆ ದೇವರು ಹೋಗು ವುದು ಎಂದೂ ಅವಶ್ಯವಿಲ್ಲ. ಆತನು ತನ್ನ ಸೃಷ್ಟಿಯಲ್ಲಿ ಸಂಪೂರ್ಣವಾಗಿ ತುಂಬಿರುವನು. ಈ ಸಮಯದಲ್ಲಿ ನೀವು ದೇವರೊಂದಿಗೆ ಸಮೀಪದಲ್ಲಿರುವಷ್ಟು ವಿಶ್ವದಲ್ಲಿ ಯಾವುದೇ ಭಾಗದಲ್ಲಿ ನೀವು ಆತನಿಗೆ ಇಷ್ಟು ಸಮೀಪದಲ್ಲಿರುವದಿಲ್ಲ. ದೇವರ ಸಮೀಪಕ್ಕೆ ಬರುವದಕ್ಕೆ ತೀರ್ಥ ಯಾತ್ರೆಯ ಅಗತ್ಯವಿಲ್ಲ. ಆದರೆ ಪಶ್ಚಾತ್ತಾಪ, ದೀನತೆ ಹಾಗೂ ವಿಧೇಯತೆಯ ಅವಶ್ಯಕತೆಯಿದೆ. ಆತನ ಬಳಿಗೆ ಬರುವುದು ಅಂದರೆ ಆತನಂತೆ ಆಗುವುದು ಆಗಿದೆ. ಹಾಗೆಯೇ ಆತನಿಂದ ದೂರ ಹೋಗುವುದು ಅಂದರೆ ಆತನಿಗಿಂತ ಕಡೆಮೆಯಾಗುವುದು ಎಂದರ್ಥ.

“ದೇವರು ಪರಲೋಕದಲ್ಲಿ ಇರುವನು ಎಂಬುದು ಸತ್ಯವಾಗಿರುವದಿಲ್ಲವೋ?” ಎಂದು ನೀವು ಕೇಳಬಹುದು. ಹೌದು, ಆದರೆ ಅಲ್ಲಿ ಮಾತ್ರವೇ ಅಲ್ಲ, “ ‘ನನ್ನ ಕಣ್ಣಿಗೆ ಬೀಳದಂತೆ ಯಾವನಾದರೂ ಗುಪ್ತಸ್ಥಳಗಳಲ್ಲಿ ತನ್ನನ್ನು ಮರೆಮಾಡಿಕೊಂಡಾನೇ? ಎಂದು ಕರ್ತನು ಹೇಳುತ್ತಾನೆ.’ ನಾನು ಭೂಮ್ಯಾಕಾಶಗಳಲ್ಲಿಯೂ ವ್ಯಾಪಿಸಿರುವವನಲ್ಲವೆ?” ಎಂದು ಕರ್ತನು ಹೇಳುತ್ತಾನೆ (ಯೆರೆಮೀಯ 23:24). “ದೇವರು ನಿಜವಾಗಿ ಭೂಲೋಕ ದಲ್ಲಿ ವಾಸಿಸುವನೋ? ಆಕಾಶವೂ ಉನ್ನತೋನ್ನತವಾದ ಆಕಾಶವೂ ನಿನ್ನ ವಾಸಕ್ಕೆ ಸಾಲವುಣಿ ಹೀಗಿರುವಲ್ಲಿ ನಾನು ಕಟ್ಟಿಸಿದ ಈ ಮಂದಿರವು ಹೇಗೆ ಸಾಕಾದೀತು!” (1 ಅರಸು 8:27) ಎಂದು ಸೊಲೊಮೋನನು ಹೇಳಿದನು. ದೇವರು ಆತ್ಮಸ್ವರೂಪನು ಆದುದರಿಂದ ಆತನು ಯಾವುದೇ ಸ್ಥಳಕ್ಕೆ ಬಂಧಿಸಲ್ಪಟ್ಟವನಲ್ಲ ಎಂದು ಯೇಸು ಸಹ ಬೋಧಿಸಿದನು (ಯೋಹಾನ 4:24). ದೇವರು ಜೀವಿಯಂತೆ ಭೂಲೋಕದಿಂದ ಬಹಳ ದೂರದಲ್ಲಿದ್ದಾನೆ, ಆತನ ನಿವಾಸವು ಆಕಾಶದಲ್ಲಿದೆ ಎಂದು ಅನೇಕರು ದೇವರ ಬಗ್ಗೆ ಬೋಧಿಸಿದ್ದಾರೆ. ಆದರೆ ದೇವರು ಎಲ್ಲಾ ಕಡೆಗಳಲ್ಲಿದ್ದಾನೆ ಹಾಗೂ ಎಲ್ಲಾ ಕಡೆಗಳಲ್ಲಿ ನಾವು ಆತನನ್ನು ಸಂಧಿಸಬಹುದು. ದೇವರು ಒಂದು ವೃತ್ತದಂತೆ ಇದ್ದು ಆತನ ಕೇಂದ್ರವು ಎಲ್ಲೆಲ್ಲಿಯೂ ಇರುವುದು ಮತ್ತು ಆತನ ಸುತ್ತಳತೆಯು ಎಲ್ಲಿಯೂ ಇರುವದಿಲ್ಲ ಎಂದು ಹೇಳಲ್ಪಟ್ಟಿದೆ.

ದೇವರಿಗೂ ವಿಶ್ವಕ್ಕೂ ಮಧ್ಯದಲ್ಲಿ ಸಂಬಂಧವನ್ನು ಸ್ಥಾಪಿಸಲು ಎರಡು ಪದಗಳು ಉಪಯೋಗದಲ್ಲಿ ಬಂದಿವೆ: ವಿಶ್ವವ್ಯಾಪಕತ್ವ (“immanence”) ಹಾಗೂ ಸರ್ವವಿಶಾಲತ್ವ. (“transcendence”). ದೇವರು ಹಾಗೂ ವಿಶ್ವ (ದೇವರು ಮತ್ತು ದೇವರಲ್ಲದ ಎಲ್ಲವೂ) ಎಂಬ ಎರಡೂ ಅಸ್ತಿತ್ವದಲ್ಲಿ ಇವೆ ಎಂಬ ಭಾವನೆಯು ಮನಸ್ಸಿನಲ್ಲಿಟ್ಟುಕೊಂಡು, “ಸರ್ವವಿಶಾಲತ್ವ” ಅಂದರೆ ದೇವರು ಇನ್ನೊಂದು ಘಟಕವನ್ನು ದಾಟಿ ಹೋಗುವದರಿಂದ ಆತನು ಜಗತ್ತಿಗಿಂತ ಹೆಚ್ಚಿನವನಾಗಿದ್ದಾನೆ ಮತ್ತು ಆತನು ಅದರ ಮೇಲಿದ್ದಾನೆ ಎಂದು ಅರ್ಥವಾಗುತ್ತದೆ. ಆತನು ಜಗತ್ತಿಗಿಂತ ಮಿಗಿಲಾದವನಾಗಿದ್ದರೂ ಆತನು ಇನ್ನೂ ಅದರಲ್ಲಿ ವಾಸಿಸುತ್ತಾನೆ ಮತ್ತು ಅದನ್ನು ವ್ಯಾಪಿಸಿಕೊಂಡಿದ್ದಾನೆ, ಪ್ರೀತಿಯಲ್ಲಿ ಅದರ ಸಮೀಪಕ್ಕೆ ಬರುತ್ತಾನೆ. ಅದರಲ್ಲಿ ಕಾರ್ಯಸಾಧಿಸುವದನ್ನು ಮುಂದುವರಿಸುತ್ತಾನೆ. ಇದು “ವಿಶ್ವವ್ಯಾಪಿ” ಎಂಬುದರ ಅರ್ಥವಾಗುತ್ತದೆ. ದೇವರು ತನ್ನ ವಿಶ್ವದ ಮೇಲೆ ದೂರದಿಂದ ಕಾರ್ಯ ಮಾಡುವದಿಲ್ಲ.

ವಿಶ್ವವ್ಯಾಪಕತ್ವವು ದೇವರು ವಾಸಿಸುವ ಸಮಯವನ್ನೂ ಸ್ಥಳವನ್ನೂ ಕುರಿತ ಭಾವವನ್ನು ಒಳಗೊಂಡಿರುತ್ತದೆ. “ಸದಾಕಾಲ ಜೀವಿಸುವ ಉನ್ನತನು, ಮಹೋನ್ನ ತನು” ಎಂದು ಯೆಶಾಯನು ದೇವರಿಗೆ ಸಂಬಂಧಿಸಿ ಹೇಳಿದ್ದಾನೆ (ಯೋಶಾಯ 57:15). ಕೀರ್ತನೆಗಾರನು, “ಬೆಟ್ಟಗಳು ಉಂಟಾಗುವದಕ್ಕಿಂತ” ಮೊದಲಿನಿಂದಲೂ, ಭೂಮಿಯೂ ಅದರ ದೇಶಗಳೂ ಉಂಟಾಗುವದಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದವನು ಎಂದು ಆತನ ಬಗ್ಗೆ ಮಾತಾಡಿದ್ದಾನೆ. “ಯುಗಯುಗಾಂತರಗಳಲ್ಲಿಯೂ ನೀನೇ ದೇವರು” (ಕೀರ್ತನೆ 90:2) ಎಂದು ಕೂಡಿಸಿದ್ದಾನೆ. ಇದು ಸಮಯಕ್ಕೆ ಸಂಬಂಧಿಸಿ ದೇವರ ನಿತ್ಯತ್ವದ ಬಗ್ಗೆ ಹೇಳುತ್ತಾನೆ. ಆತನು ನಿತ್ಯವೂ ವಾಸಿಸುತ್ತಾನೆ. ಭೂತಕಾಲ, ವರ್ತಮಾನ ಕಾಲ ಮತ್ತು ಭವಿಷತ್ಕಾಲ ಎಂದು ನಾವು ತಿಳಿದಿರುವದರಲ್ಲಿಯೂ ಆತನು ವಾಸಿಸುತ್ತಾನೆ.

## ಸರ್ವಜ್ಞಾನ

ಸರ್ವವ್ಯಾಪಕತ್ವಕ್ಕೆ ಸಂಗಾತಿಯಾಗುವ ಸಂಗತಿ ಸರ್ವಜ್ಞಾನವಾಗಿದೆ, ದೇವರ

ಪರಿಪೂರ್ಣ ಜ್ಞಾನ. ಸರ್ವ ವ್ಯಾಪಕತ್ವವು ಸರ್ವಜ್ಞಾವನ್ನು ಸೂಚಿಸುತ್ತದೆಣಿ ಸರ್ವಜ್ಞಾವನ್ನು ಸರ್ವವ್ಯಾಪಕತ್ವದ ಭಾಗವೆಂದು ನಾವು ಕರೆಯಬಹುದು. ದೇವರು ಎಲ್ಲರಿಗೂ ಪ್ರಸನ್ನನಾಗಿರುವನು ಹಾಗೂ ಯಾವುದರಿಂದಲೂ ಮರೆಯಾಗಿರುವದಿಲ್ಲ. ಆದುದರಿಂದ ಆತನು ತಿಳಿಯುವ ಎಲ್ಲಾ ಬಲದೊಂದಿಗೆ ಪ್ರಸನ್ನನಾಗಿರುವನು. ಆತನ ಪರಿಪೂರ್ಣ ಮನಸ್ಸು ಆತನ ಸನ್ನಿಧಿಯಲ್ಲಿ ಇರುವಂಥದ್ದನ್ನು ತಿಳಿಯದೆ ಪರಿಪೂರ್ಣವಾಗಿರಲಾರದು. ದೇವರು ಪ್ರತಿಯೊಂದನ್ನು ತಿಳಿಯದೇ ಸರ್ವಜ್ಞಾನಿಯಾಗಿರಲಾರನು. ಕೀರ್ತನೆ 139ರಲ್ಲಿ ಬರಹಗಾರನು, ಸರ್ವವ್ಯಾಪಕತ್ವ ಮತ್ತು ಸರ್ವಜ್ಞಾನವೆಂಬ ಎರಡೂ ಗುಣಲಕ್ಷಣಗಳೊಂದಿಗೆ, ಭಕ್ತಿಯುಳ್ಳ ಸಂತೋಷದೊಡನೆ ಬರೆಯುತ್ತಿದ್ದನು. ದೇವರು ಪ್ರತಿಯೊಂದು ಕಡೆಯಲ್ಲಿ ಇರುವದರಿಂದ, ಆತನು ಎಲ್ಲವನ್ನು ಬಲ್ಲವನಾಗಿರುವನೆಂಬ ಭಾವವನ್ನು ಕೀರ್ತನೆಗಾರನು ತಿಳಿಸಿದನು. ಆತನು ತನ್ನ ವಿಶ್ವದಲ್ಲಿ ಎಲ್ಲಾ ಕಡೆಗಳಲ್ಲಿಯೂ ಇರುವನು ಮತ್ತು ನಿತ್ಯತ್ವದಲ್ಲಿ ಇರುವನು. ಒಬ್ಬನು ದೇವರ ಜ್ಞಾನದಿಂದ ತಪ್ಪಿಸಿಕೊಳ್ಳ ಲಾಗದಿದ್ದರೆ, ಅವನು ದೇವರ ಸನ್ನಿಧಿಯಿಂದ ತಪ್ಪಿಸಿಕೊಳ್ಳಲಾರನು. ಅಸ್ತಿತ್ವದ ಎರಡು ವಿಭಾಗಗಳಲ್ಲಿ ಇರುವಾತನಾದ ದೇವರು, ಇನ್ನೊಂದು ವಿಭಾಗವಾದ ವಿಶ್ವದ ಪರಿಪೂರ್ಣ ಜ್ಞಾನ ಉಳ್ಳವನಾಗಿರುವನು. ಅದಕ್ಕೆ ಕೂಡಿಸಿ, ದೇವರು ತನ್ನನ್ನು ಪರಿಪೂರ್ಣವಾಗಿ ತಿಳಿದುಕೊಂಡಿರುವನು.

ಎಲ್ಲಾ ಮಾನವ ಜ್ಞಾನವು ಪರಿಪೂರ್ಣವಾಗಿರುವುದಿಲ್ಲ. ನಾವು ಯಾವುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾರೆವು, ಇಲ್ಲವೇ ಕನಿಷ್ಠವಾದವುಗಳನ್ನಾಗಲೀ ಶ್ರೇಷ್ಠವಾದದ್ದನ್ನಾಗಲೀ ಅರ್ಥಮಾಡಿಕೊಳ್ಳಲಾರೆವು. ಯಾಕಂದರೆ ಪ್ರತಿಯೊಂದು ಅಧೀನತೆಯಲ್ಲಿ ಇರುವ ಯಾವುದನ್ನೂ ಪೂರ್ಣವಾಗಿ ನಾವು ಅರ್ಥಮಾಡಿಕೊಳ್ಳುವದಿಲ್ಲ. ಆದುದರಿಂದ, ದೇವರ ಸರ್ವಜ್ಞಾನವನ್ನು ಅರ್ಥಮಾಡಿಕೊಳ್ಳುವದರಲ್ಲಿ ಯಾವುದೇ ಸಹಾಯ ಮಾಡುವದಿಲ್ಲ. ಎಲ್ಲಾ ಜ್ಞಾನವು ನಮಗೆ ಸಾಧ್ಯವಾದದ್ದಲ್ಲ ಎಂಬಂತೆ ಅದು ಇರುವುದು. ನಮ್ಮ ಎಲ್ಲಾ ಜ್ಞಾನವು ಅಜ್ಞಾನವಾಗಿದೆ ಮತ್ತು ದೇವರ ಜ್ಞಾನಕ್ಕೆ ಹೋಲಿಸಿದರೆ ಹುಚ್ಚುತನವಾಗಿದೆ. ಇಲ್ಲಿಯವರೆಗೆ ಜೀವಿಸಿರುವ ಎಲ್ಲಾ ಬುದ್ಧಿವಂತರ ಜ್ಞಾನವನ್ನು ಒಂದಾಗಿ ಕೂಡಿಸಿದರೆ ಅದು ಸರ್ವಜ್ಞಾನಕ್ಕೆ ಸರಿಸಮಾನವಾಗುವದಿಲ್ಲ. ಸರ್ವಜ್ಞಾನ ಅಂದರೆ ಹಿಂದಿನ, ಇಂದಿನ ಹಾಗೂ ಮುಂದಿನ ಎಲ್ಲಾ ಸಂಗತಿಗಳ ಜ್ಞಾನವು ಒಂದೇ ಸಮಯದಲ್ಲಿ ಇರುವಂಥದ್ದಾಗಿದೆ: “ಜಗತ್ತಿನ ಪ್ರಾರಂಭದಿಂದ ಆತನ ಎಲ್ಲಾ ಕಾರ್ಯಗಳು ದೇವರಿಗೆ ತಿಳಿದಿರುತ್ತವೆ” (ಅಪೊಸ್ತಲರ ಕೃತ್ಯ 15:18ಣಿ KJV). ದೇವರ ಜ್ಞಾನವು ಎಷ್ಟು ತುಂಬಿಸಲ್ಪಟ್ಟದ್ದಾಗಿದೆಯಲ್ಲವೇ! “ಕರ್ತನೇ, ನೀನು ಎಲ್ಲಾ ಬಲ್ಲೆ” ಎಂದು ಪೇತ್ರನು ಹೇಳಿ ದನು (ಯೋಹಾನ 21:17). “ಅತನೊಬ್ಬನೇ ಭೂಮಿಯ ಕಟ್ಟಕಡೆಯ ತನಕ ದೃಷ್ಟಿಸಿ ಆಕಾಶದ ಕೆಳಗಿನ ಸಮಸ್ತವನ್ನೂ ನೋಡುವವನಾಗಿದ್ದಾನೆ” (ಯೋಬ 28:24) ಎಂದು ಯೋಬನು ಹೇಳಿದನು. ನಕ್ಷತ್ರಗಳ ಬಗ್ಗೆ ಮಾತಾಡುವಾಗ ಯೆಶಾಯನು, “ಈ ಸೈನ್ಯವನ್ನು ಲೆಕ್ಕಕ್ಕೆ ಸರಿಯಾಗಿ ಮುಂದರಿಸುತ್ತಾನಲ್ಲಾಣಿ ಎಲ್ಲವನ್ನೂ ಹೆಸರೆತ್ತಿ ಕರೆಯುತ್ತಾನೆ” (ಯೆಶಾಯ 40:26) ಎಂದು ಹೇಳುತ್ತಾನೆ. ದೇವರು ವಿಶ್ವವನ್ನು ಅದರ ಸಂಪೂರ್ಣತೆಯಲ್ಲಿ ತಿಳಿದವನಾಗಿರುತ್ತಾನೆ.

ಮನುಷ್ಯನನ್ನು ಕುರಿತು ದೇವರು ಎಲ್ಲಾ ಸಂಗತಿಯನ್ನು ತಿಳಿದಿದ್ದಾನೆ. ಈಗಾಗಲೇ ಸಂಭವಿಸಿದ ಪ್ರತಿಯೊಂದನ್ನೂ ಆಗಲೇ ಆತನು ತಿಳಿದಿರುವನು. ಬೇರೆ ಯಾವ ಮಾರ್ಗ ಅನುಸರಿಸಿದ್ದರೂ ಏನಾಗುತ್ತಿತ್ತು ಎಂಬುದನ್ನು ಆತನು ಬಲ್ಲವನಾಗಿದ್ದಾನೆ. ಆತನ ಸಮಯದಲ್ಲಿ ಮಾಡಲ್ಪಟ್ಟ ಅದ್ಭುತ ಕಾರ್ಯಗಳನ್ನು ನೋಡಿದ್ದರೆ, ತೂರ್, ಸಿದೋನಿನವರು ಮಾನಸಾಂತರ ಪಡುತ್ತಿದ್ದರೆಂದು ಯೇಸು ಹೇಳಿದನು (ಮತ್ತಾಯ 11:21).

ಮನುಷ್ಯನಲ್ಲಿ ಏನಿರುವುದು ಎಂಬುದನ್ನು ದೇವರು ತಿಳಿದವನಾಗಿರುತ್ತಾನೆ:

> ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವುದು, ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು (ಜ್ಞಾನೋಕ್ತಿ 15:3).

> ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ (ಇಬ್ರಿಯ 4:13).

ಒಂದು ಸಂದರ್ಭದಲ್ಲಿ ಅಪೊಸ್ತಲರು ದೇವರಿಗೆ ಪ್ರಾರ್ಥಿಸಿದಾಗ, ಅವರು ಆತನನ್ನು "ಎಲ್ಲಾ ಜನರ ಹೃದಯಗಳನ್ನು ಬಲ್ಲವನೇ" ಎಂದು ಸಂಬೋಧಿಸಿದರು (ಅಪೊಸ್ತಲರ ಕೃತ್ಯ 1:24). ನಮ್ಮ ತಲೆಯ ಕೂದಲುಗಳು ಎಣಿಸಲ್ಪಟ್ಟಿರುವವು ಮತ್ತು ಬೀಳುವ ಪ್ರತಿಯೊಂದು ಗುಬ್ಬಿಯನ್ನು ದೇವರು ತಿಳಿದಿರುವನು ಎಂದು ಯೇಸು ಬೋಧಿಸಿದನು (ಮತ್ತಾಯ 10:29, 30). "ನೀವು ಕೇಳುವದಕ್ಕಿಂತ ಮುಂಚಿತವಾಗಿಯೇ ನಿಮಗೆ ಏನು ಬೇಕೆಂಬುದನ್ನು ತಂದೆಯು ತಿಳಿದಿರುವನು" ಎಂದು ಯೇಸು ನಮಗೆ ಭರವಸೆ ಕೊಟ್ಟಿರುವನು (ಮತ್ತಾಯ 6:8). ದೇವರ ಜ್ಞಾನವು ಎಲ್ಲವನ್ನೂ ತಿಳಿದಿರುತ್ತದೆ, ಅದಕ್ಕೆ ಬಂಧನಗಳೇ ಇರುವದಿಲ್ಲ.

## ಸರ್ವ ಶಕ್ತಿ

ಅಬ್ರಹಾಮನು ತೊಂಭತ್ತೊಂಭತ್ತು ವರ್ಷ ಪ್ರಾಯದವನಾದಾಗ ಕರ್ತನು ಅವನಿಗೆ ಕಾಣಿಸಿಕೊಂಡು, "ನಾನು ಸರ್ವಶಕ್ತನಾದ ದೇವರು" (ಆದಿಕಾಂಡ 17:1) ಎಂದು ಹೇಳಿದನು. ಈ ಹೆಸರು ದೇವರ ಶಕ್ತಿಯನ್ನೂ ಬಲವನ್ನೂ ಸೂಚಿಸುತ್ತದೆ. ದೇವರು ಅಬ್ರಹಾಮನಿಗೆ ಸಂತತಿಯನ್ನು ವಾಗ್ದಾನ ಮಾಡಿದ ನಂತರ ಆ ವಾಗ್ದಾನಕ್ಕೆ ಸಾರಳು ನಕ್ಕನಂತರ, ದೇವರು ಅಬ್ರಹಾಮನಿಗೆ ಈ ಪ್ರಶ್ನೆ ಕೇಳಿದನು: "ಕರ್ತನಿಗೆ ಅಸಾಧ್ಯವಾದದ್ದುಂಟೋ?" (ಆದಿಕಾಂಡ 18:14). ಬೈಬಲಿನ ಪುಟಗಳಲ್ಲಿ ತೋರಿಸಲ್ಪಟ್ಟ ಹಾಗೂ ಯೇಸು ಕ್ರಿಸ್ತನಲ್ಲಿ ಆತನನ್ನು ನೋಡಿದಂಥ ದೇವರೊಂದಿಗೆ ಅಸಾಧ್ಯವಾದದ್ದು ಯಾವುದೂ "ಇಲ್ಲ!" ಎಂದು ಈ ಪ್ರಶ್ನೆಗೆ ಉತ್ತರ ಕೊಡತಕ್ಕದ್ದು. ದೇವರ ಶಕ್ತಿಯು ಆತನ ಗುಣಲಕ್ಷಣಗಳಲ್ಲಿ ಸ್ಪಷ್ಟವಾಗಿದೆ. "ದೇವರೊಂದಿಗೆ ಎಲ್ಲವೂ ಸಾಧ್ಯ" ಎಂದು ಯೇಸು ಹೇಳಿದನು (ಮತ್ತಾಯ 19:26). ದೇವದೂತನು ಮರಿಯಳಿಗೆ ಪ್ರತ್ಯಕ್ಷವಾದಾಗ, ದೇವರು ಆಕೆಯನ್ನು ಕರ್ತನ ತಾಯಿಯಾಗಲು ಆಯ್ಕೆ ಮಾಡಿಕೊಂಡಿದ್ದಾನೆಂದು ತಿಳಿಸಿದಾಗ, "ದೇವರೊಂದಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ" (ಲೂಕ 1:37) ಎಂದು ಹೇಳಿದನು.

ಅದ್ಭುತ ಕಾರ್ಯಗಳು ದೇವರ ಸರ್ವಶಕ್ತಿಯ ಬಗ್ಗೆ ಸಾಕ್ಷಿಕೊಡುತ್ತವೆ. ಶದ್ರಕ್, ಮೇಶಕ್, ಅಬೇದ್‌ನೆಗೋ ಅವರನ್ನು ಸುಡದ ಹಾಗೆ ಬೆಂಕಿಯು ತಡೆಹಿಡಿಯಲ್ಪಟ್ಟಿತು, ಕೆಂಪು ಸಮುದ್ರದ ನೀರನ್ನು ಇಬ್ಭಾಗ ಮಾಡಲು, ಕೊಡ್ಲಿಯನ್ನು ನೀರಲ್ಲಿ ತೇಲುವಂತೆ ಮಾಡಲು, ರೋಷದಿಂದಿದ್ದ ಸಮುದ್ರಗಾಳಿಯನ್ನು ಶಾಂತ ಪಡಿಸಲು ಹಾಗೂ ನೀರನ್ನು ರುಚಿಕರವಾದ ದ್ರಾಕ್ಷಾರಸವನ್ನಾಗಿ ಮಾಡಲು ಆತನು ಶಕ್ತನಾಗಿದ್ದನು. ಏನೂ ಇಲ್ಲದ್ದರಿಂದ ಪ್ರಕೃತಿಯನ್ನು ಸೃಷ್ಟಿಸಿದ್ದು ಮಿತಿಯಿಲ್ಲದ ಶಕ್ತಿಯನ್ನು ಪ್ರದರ್ಶಿಸುತ್ತದೆ. ದೇವರ ಕೈಕೆಲಸವು ನಕ್ಷತ್ರ ತುಂಬಿದ ಆಕಾಶದಲ್ಲಿ ಕಂಡುಬರುತ್ತದೆ. ಆಕಾಶವು ಆತನ

ಮಹಿಮೆಯನ್ನು ಪ್ರದರ್ಶಿಸುತ್ತದೆ. ಸೃಷ್ಟಿಯಲ್ಲಿ, ಇತಿಹಾಸದಲ್ಲಿ ಮತ್ತು ವಿಮೋಚನೆಯಲ್ಲಿ ಆತನ ಬಲವು ಕಂಡುಬರುತ್ತದೆ. "ಸತ್ತು ಹೋಗಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜ್ಯತ್ವ, ಅಧಿಕಾರ, ಮಹತ್ವ, ಪ್ರಭುತ್ವಾದಿಗಳ ಮೇಲೆ ... ತನ್ನ ಬಲಗಡೆಯಲ್ಲಿ ಕೂಡ್ರಿಸಿ ಕೊಂಡದ್ದರಲ್ಲಿ ..." (ಎಫೆಸ 1:20) ದೈವಿಕ ಶಕ್ತಿಯ ಮಹಾ ಪ್ರದರ್ಶನವಾಗಿದೆ.

ಸರ್ವಶಕ್ತಿಯೂ ದೇವರ ಸರ್ವಜ್ಞಾನಕ್ಕೆ ಮತ್ತು ಸರ್ವವ್ಯಾಪಕತ್ವಗಳಿಗೆ ನಿಕಟವಾಗಿ ಸಂಬಂಧಿಸಲ್ಪಟ್ಟಿದೆ. ಆತನು ಎಲ್ಲಾ ಕಡೆಗಳಲ್ಲಿ ಇರುವನು ಎಂಬ ಸಂಗತಿಯು ಆತನು ಎಲ್ಲಾ ಸಂಗತಿಗಳನ್ನು ತಿಳಿದಿರುವನು ಮತ್ತು ಎಲ್ಲಾ ಕಡೆಗಳಲ್ಲಿ ಕಾರ್ಯಮಾಡಲು ಆತನನ್ನು ಶಕ್ತನನ್ನಾಗಿ ಮಾಡುತ್ತದೆ. ದೇವರು ಶಕ್ತನು, ತಕ್ಕವನು, ಸಾಕಷ್ಟಾದವನು ಆಗಿದ್ದಾನೆ. ಆತನು ವಿಶ್ವದ ಒಡೆಯನು ಸರ್ವಶಕ್ತನು, ವಿಶ್ವವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವವನು ಆಗಿದ್ದಾನೆ. ಮಾಡಬೇಕಾದ ಎಲ್ಲವನ್ನೂ ಮಾಡಲು ಆತನು ಸಾಮರ್ಥ್ಯವುಳ್ಳವನು. ಮಾನವ ಚರಿತ್ರೆಯಲ್ಲಿ ಆತನು ಮಾಡಿದ ಯಾವುದೇ ಸಂಗತಿಯನ್ನು ದಾಟಿ ಆತನ ಬಲವು ವಿಸ್ತರಿಸುತ್ತದೆ. ಆತನ ಸ್ವಂತ ಸ್ವಭಾವವು ಹಾಗೂ ಆತನ ವಿಶ್ವಕ್ಕಾಗಿ ಬೇಕಾಗುವ ಪ್ರತಿಯೊಂದು ವಿಧಾನವು ಎಲ್ಲಾ ಕಡೆಗಳಲ್ಲಿ ಕಾರ್ಯಮಾಡುತ್ತದೆ.

## ಮಾನವ ಭಾಷೆಯಲ್ಲಿ ದೇವರು ವಿವರಿಸಲ್ಪಟ್ಟದ್ದು

ಬೈಬಲಿನಲ್ಲಿಯ ಕೆಲವು ವಾಕ್ಯಗಳು ಈ ಪಾಠದಲ್ಲಿ ಹೇಳಿದ್ದಕ್ಕೆ ವ್ಯತ್ಯಾಸದಲ್ಲಿರುವಂತೆ ತೋರುತ್ತದೆ. ದೇವರು ಎಲ್ಲಾ ಕಡೆಗಳಲ್ಲಿಯೂ ಇದ್ದರೆ, ಮಾನವ ಜೀವಿಯು ಹೆಚ್ಚಾಗಿ ಮಾಡುವಂತೆ ಆತನು ಬರುವದನ್ನೂ ಹೋಗುವದನ್ನೂ ಪರಿಶುದ್ಧ ಬರಹಗಳು ಮಾತಾಡುವುದು ಹೇಗೆ? ಆತನು ಏದೆನ್ ತೋಟದಲ್ಲಿ ನಡೆದಾಡಿದನು, ಬಾಬೆಲ್ ಗೋಪುರ ಕಟ್ಟುವಾಗ ಆತನು ಇಳಿದು ಬಂದನು, ಅನೇಕ ವ್ಯಕ್ತಿಗಳಿಗೆ ಕಾಣಿಸಿಕೊಂಡನು, ಕೆರೂಬಿಯರ ಮಧ್ಯದಲ್ಲಿ ಚೀಯೋನಿನಲ್ಲಿ ಆತನು ವಾಸಿಸಿದನು ಎಂದು ನಮಗೆ ಹೇಳಲ್ಪಟ್ಟಿದೆ. ದೇವರು ಸ್ಥಳೀಯನಾಗಿರುವದಿಲ್ಲ, ಆದರೆ ದೇವರ ಕಾಣಿಸಿಕೊಳ್ಳುವಿಕೆಗಳು ಸ್ಥಳಿಕವಾದವುಗಳಾಗಿದ್ದವೆಂದು ಈ ಹೇಳಿಕೆಗಳನ್ನು ನಾವು ವಿವರಿಸಬಹುದು. ಸ್ಥಳಕ್ಕೆ ದೇವರ ಸಂಬಂಧವು ಬಹಳವಾಗಿ ಅಲಂಕಾರಿಕವಾಗಿ ಮಾತಾಡಲ್ಪಟ್ಟಿವೆಯೆಂದು ನಾವು ಗ್ರಹಿಸಿಕೊಳ್ಳತಕ್ಕದ್ದು. ಮನುಷ್ಯನಿಗೆ ಬಹುಮಾನ ಕೊಡಲು ಇಲ್ಲವೇ ದಂಡಿಸಲು ಬಹಳ ದೂರದಿಂದ ದೇವರು ಬರುವನು ಎಂದು ಹೇಳುವುದು ದೇವರ ಕೃತ್ಯಗಳನ್ನು ವಿವರಿಸುವಲ್ಲಿ ಮಾನವ ಮಾತುಗಳನ್ನು ಉಪಯೋಗಿಸುವುದಾಗಿದೆ. ಪಂಡಿತರು ಅಂಥ ರೂಪಕಾಲಂಕಾರಿಕ ಹೇಳಿಕೆಗಳನ್ನು "anthropomorphisms," ಅಂದರೆ ದೇವರು ಮಾನವ ಜೀವಿಗಳಿಗೆ ಮಾನವ ಮಾತುಗಳಲ್ಲಿ ತನ್ನನ್ನು ಪ್ರಕಟಿಸಿಕೊಳ್ಳುವುದು ಎಂದು ಹೇಳುತ್ತಾರೆ.

ದೇವರಿಗೆ ಮಾನವ ದೇಹದ ಅಂಗಗಳಿರುವವು ಮತ್ತು ಮಾನವ ಕಾರ್ಯಗಳನ್ನು ಆತನು ಮಾಡುವನು ಎಂದು ಹೇಳುವ ವಾಕ್ಯಗಳಿಂದ ಇದು ಸತ್ಯವಾಗಿರುತ್ತದೆ. ಆತನಿಗೆ ಮುಖವು, ಕಣ್ಣುಗಳು, ಮೂಗಿನ ಹೊರಳೆಗಳು, ಭುಜಗಳು ಮತ್ತು ಕಾಲುಗಳು ಇವೆಯೆಂದು ಹೇಳಲಾಗಿದೆ. ಆತನು ಸಿಹಿಪದಾರ್ಥವನ್ನು ಮೂಸಿ ನೋಡುವನು, ನಗುವನು, ಪಶ್ಚಾತ್ತಾಪ ಪಡುವನು ಮತ್ತು ಇತರ ದೇವರುಗಳ ಬಗ್ಗೆ ಅಸೂಯ ಪಡುವನು ಎಂದು ಹೇಳಲ್ಪಟ್ಟಿದೆ. ಇವುಗಳನ್ನು ನಾವು ಅಕ್ಷರಶ ವಾಗಿ ಅರ್ಥಮಾಡಿಕೊಳ್ಳಬಾರದು. ದೇವರ

ಯಾವುದೇ ಗುಣಲಕ್ಷಣವು ಇಲ್ಲವೇ ಸ್ವಭಾವವು ಮನುಷ್ಯನು ಅರ್ಥಮಾಡಿಕೊಳ್ಳುವ ಮಾತುಗಳಲ್ಲಿ ವಿವರಿಸಲ್ಪಡಬೇಕು ಹಾಗೂ ಅಂಥ ವಿವರಣೆಗಳನ್ನು ಹೊಂದಾಣಿಕೆ ಮಾಡಿಕೊಂಡ ಭಾಷೆಯಂತೆ ದೃಷ್ಟಿಸಬೇಕು. ಹೀಗಿದ್ದರೂ ಈ ಅಲಂಕಾರಿಕ ಮಾತುಗಳು ದೈವಿಕ ನಡೆತೆಯಲ್ಲಿ ಈ ಗುಣಲಕ್ಷಣಗಳಿಗೂ ಕೃತ್ಯಗಳಿಗೂ ಯಾವುದೋ ಸಂಗತಿ ಸಾಮ್ಯತೆಯುಳ್ಳದ್ದಾಗಿದ್ದು ಅದರ ಮೇಲಿನ ಈ ವಿವರಣೆಯು ಅವಲಂಭಿಸಿರುತ್ತದೆ. ಈ ಸ್ಪಷ್ಟ ಹೇಳಿಕೆಗಳನ್ನು ಅಕ್ಷರಶ ವಾಗಿ ತೆಗೆದು ಕೊಳ್ಳಲಿಲ್ಲ. ಅವರು ಹಾಗೆ ಮಾಡಿದ್ದರೆ, ದೇವರಿಗೆ ರೆಕ್ಕೆಪುಕ್ಕಗಳಿವೆ, ಹಬ್ಬಿಕೊಂಡ ಕೊಂಬೆಗಳ ಮರಗಳಿವೆ ಎಂದು ನಂಬುತ್ತಿದ್ದರು. ಯಾಕಂದರೆ ಈ ವಿವರಣಾತ್ಮಕ ಮಾತುಗಳ ಬಗ್ಗೆ ಸಹ ಅವರು ಮಾತಾಡಿದರು.

## ವ್ಯವಹಾರಿಕ ವಿಶೇಷಾರ್ಥ

ದೇವರ ಅನಂತ ಶಕ್ತಿಯು ದೇವರ ಮಗನಿಗೆ ಬಹಳ ಆದರಣೆಯು ಹಾಗೂ ತೃಪ್ತಿಯ ಮೂಲವು ಆಗಿದೆ. ದೇವರು ಎಲ್ಲಾ ಕಡೆಗಳಲ್ಲಿಯೂ ಇರುವದರಿಂದ, ಆತನು ನನ್ನಲ್ಲಿಯೂ ನನ್ನ ಸಮಯದಲ್ಲಿಯೂ ಇರುವನು. ಒಂದು ಸಲ ಅಂತೋನಿ ಕೊಲಿನ್ಸ, ತನ್ನ ದಿನದ ಪ್ರಸಿದ್ಧ ಅವಿಶ್ವಾಸಿಯು, ಆರಾಧನೆಯ ಸ್ಥಳಕ್ಕೆ ಹೋಗುತ್ತಿದ್ದ ಒಬ್ಬ ಸಾಮಾನ್ಯ ಮನುಷ್ಯನನ್ನು ಕಂಡು ಕೊಂಡನು. “ದೇವಾಲಯಕ್ಕೆ ಯಾಕೆ ಹೋಗುತ್ತೀ?” ಎಂದು ಕೊಲಿನ್ಸ ಕೇಳಿದನು. “ದೇವರನ್ನು ಆರಾಧಿಸಲು” ಎಂದು ಉತ್ತರ ಬಂದಿತ್ತು. “ನೀನು ಆರಾಧಿಸುವ ದೇವರು ದೊಡ್ಡವನೋ ಇಲ್ಲ ಚಿಕ್ಕ ದೇವರೋ?” ಎಂದು ಕೊಲಿನ್ಸ ಪ್ರಶ್ನಿಸಿದನು. ಅನಿರೀಕ್ಷಿತವಾದ ಉತ್ತರ ಹೀಗಿತ್ತು: “ಅಯ್ಯಾ, ಪರಲೋಕದ ಪರಲೋ ಕವು ಆತನನ್ನು ಒಳಗೊಂಡಿರದಷ್ಟು ಆತನು ದೊಡ್ಡವನಾಗಿದ್ದಾನೆ ಹಾಗೂ ಆತನು ನನ್ನ ಹೃದಯದಲ್ಲಿ ವಾಸಿಸುವಷ್ಟು ಚಿಕ್ಕವನಾಗಿದ್ದಾನೆ.” ದೇವರನ್ನು ಕುರಿತಾದ ಈ ಸರಳ ವಾದ ಉತ್ತರವು ದೇವರ ವಿರುದ್ಧವಾಗಿ ಬರೆದ ಪಾಂಡಿತ್ಯದ ಎಲ್ಲಾ ಗ್ರಂಥಗಳಿಗಿಂತಲೂ ಹೆಚ್ಚಾಗಿ ತನ್ನ ಮನಸ್ಸಿನ ಮೇಲೆ ಪರಿಣಾಮ ಮಾಡಿತೆಂದು ಅನಂತರದಲ್ಲಿ ಕೊಲಿನ್ಸ ಹೇಳಿದ್ದಾನೆ.

ದೇವರು ನನ್ನೊಳಗಿದ್ದಾನೆ! ನನಗೆ ಸಹಾಯ ಮಾಡಲು ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಬ್ಬ ವೈರಿ ಮತ್ತು ತೊಂದರೆಯಿಂದ ನನ್ನನ್ನು ರಕ್ಷಿಸಲು ಆತನು ನನಗೆ ಸಮೀಪ ದಲ್ಲಿದ್ದಾನೆ. “... ದೇವರು ಸಮೀಪದಲ್ಲಿದ್ದಾನೆ, ಯಾವುದಕ್ಕೂ ಚಿಂತಿಸಬೇಡಿರಿ ...” (ಫಿಲಿಪ್ಪಿ 4:5, 6). ನಾವು ಯಾವಾಗಲೂ ನಮ್ಮ ತಂದೆಯ ಕಣ್ಣೆದುರಿನಲ್ಲಿ ಇದ್ದೇವೆ. ನಾವು ಯಾವುದೇ ಕಡೆಯಲ್ಲಿ ಆತನೊಂದಿಗೆ ನಿಜವಾದ ಮತ್ತು ಬಲವಾದ ಅನ್ಯೋನ್ಯ ತೆಯನ್ನು ಅನುಭವಿಸಬಹುದು.

ನಾವು ದೇವರಿಗೆ ಸಮೀಪದಲ್ಲಿ ಜೀವಿಸುತ್ತಿದ್ದರೆ, ಆತನ ಮಹಾ ಜ್ಞಾನವು ಆದರಣೆಯ ಮೂಲವಾಗಿರುವುದು. ಆತನು ಎಲ್ಲವನ್ನು ಬಲ್ಲವನಾಗಿರುವನು. ನನ್ನನ್ನು ನನ್ನ ಅಗತ್ಯತೆಗಳನ್ನು ಬಲ್ಲವನಾಗಿರುವನುಣಿ ನನ್ನ ಭಾರಗಳನ್ನೂ, ಕಷ್ಟಗಳನ್ನೂ, ನನ್ನ ಸಮಸ್ಯೆಗಳನ್ನೂ ಬಲ್ಲವನಾಗಿರುವನು. ನನ್ನ ನಗೆಯನ್ನೂ, ನನ್ನ ಕಣ್ಣೀರುಗಳನ್ನೂ, ನನ್ನ ಆನಂದಗಳನ್ನೂ, ನನ್ನ ಶೋಕವನ್ನೂ, ನನ್ನ ಸುಖವನ್ನೂ ಆತನು ತಿಳಿದಿರುವನು. ನಾನು ಕೇಳುವದಕ್ಕಿಂತಲೂ ಮೊದಲೇ ಆತನು ನನಗೆ ಅಗತ್ಯವಾಗಿರುವ ಎಲ್ಲವನ್ನೂ ತಿಳಿದಿರುವನು.

ದೇವರು ಸರ್ವಶಕ್ತನಾಗಿರುದರಿಂದ, ಆತನು ನನ್ನ ಅಗತ್ಯತೆಗಳನ್ನು ಪೂರೈಸಲು ಶಕ್ತನಾಗಿರುವನು. ಆತನು ಎಲ್ಲಾ ಸಂಗತಿಯನ್ನು ಮಾಡಬಲ್ಲನು ಮತ್ತು ನನ್ನ ಪರವಾಗಿ

ತನ್ನ ಮಹಾಬಲವನ್ನು ಸಾಧಿಸಲು ಮನಸ್ಸುಳ್ಳವನಾಗಿರುವನು. ಆತನು ಪ್ರಾರ್ಥನೆಗೆ ಉತ್ತರ ಕೊಡ ಬಲ್ಲನು. ಆತನು ಹಾಗೆ ಮಾಡುವನೆಂದು ನಮಗೆ ಭರವಸೆಕೊಟ್ಟಿರುವನು. ನಮ್ಮ ದೇವರು, "ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾಗಿರುವನು" (ಎಫೆಸ 3:20).

ದೇವರ ಅಪರಿಮಿತತೆಯು ಕೆಲವರಿಗೆ ಆದರಣೀಯವಾದದ್ದಾಗಿದ್ದರೂ ಕೆಲವರಿಗೆ ಭಯಾನಕತೆಯ ಮೂಲವಾಗಿದೆ. ದೇವರು ಎಲ್ಲಾ ಕಡೆಗಳಲ್ಲಿ ಇರುವುದು, ಆತನು ಎಲ್ಲಾ ಸಂಗತಿಗಳನ್ನು ಬಲ್ಲವನಾಗಿರುವುದು ಹಾಗೂ ಆತನಿಗೆ ಎಲ್ಲಾ ಬಲವಿರುವುದು ಇವುಗಳ ಮೇಲೆ ಭಕ್ತಿಹೀನ ಜನರು ಅವಲಂಭಿಸಲು ಬಯಸದೇ ಇರುವ ಮಹಾಸತ್ಯಗಳಾಗಿವೆ. ಯುಗಗಳಲ್ಲೆಲ್ಲಾ, ಜನರು ದೇವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇದನ್ನು ಮಾಡುವ ಪ್ರಯತ್ನವು ಆದಾಮ ಮತ್ತು ಹವ್ವರು ತೋಟದಲ್ಲಿ ತಮ್ಮನ್ನು ಅಡಗಿಸಿಟ್ಟು ಕೊಳ್ಳಲು ಮಾಡಿದ ಪ್ರಯತ್ನದಂತೆ ಹುಚ್ಚುತನವಾಗಿದೆ (ಆದಿಕಾಂಡ 3:8). ದೇವರಿಂದ ಓಡಿ ಹೋಗುವದಕ್ಕೆ ಪ್ರಯತ್ನಿಸುವುದು ಯೋನನಂತೆ ಇದು ವ್ಯರ್ಥವಾಗಿ ನಿಲ್ಲುತ್ತದೆ (ಯೋನ 1:3). ಇಂದು ಅನೇಕರು ದೇವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವದನ್ನು ಒಪ್ಪಿಕೊಳ್ಳುವದಿಲ್ಲ. ಆದರೆ ಅವರಿಗೆ ಆ ಪ್ರವೃತ್ತಿ ಇರುವುದು ಎಂಬುದನ್ನು ಪ್ರಕಟಿಸಿದ್ದಾರೆ.

ದೇವರ ಅಸ್ತಿತ್ವದ ಬಗ್ಗೆ ಸಂಶಯಪಡುವ ಇಲ್ಲವೇ ಅಲ್ಲಗಳೆಯುವಿಕೆಯಿಂದ ನಾವು ದೇವರನ್ನು ತಪ್ಪಿಸಿಕೊಳ್ಳಲಾರೆವು. ಸಂಶೋಧನೆಯು ನಾಸ್ತಿಕರಿಗೆ ಶ್ರೇಷ್ಠವಾದದ್ದಾಗಿದೆ. ಲೆಕ್ಕಾಚಾರದ ಪ್ರಕಾರದಿಂದ ತನಗೆ ರುಜುವಾಗದ್ದನ್ನು ಅವನು ನಂಬುವದಿಲ್ಲ. "ದೇವರು ಇರುವನೋ ಇಲ್ಲವೋ ಎಂಬುದು ನನಗೆ ತಿಳಿದಿರುವದಿಲ್ಲ" ಎಂದು ಅವನು ಹೇಳುತ್ತಾನೆ. ಇತರರು ವೈಯಕ್ತಿಕ ಸುಖದ ಬಗ್ಗೆ ಆಸಕ್ತರಾಗಿದ್ದು ಕುಡಿಯುವ, ತಿನ್ನುವ ಹಾಗೂ ಉಲ್ಲಾಸಪಡುವ ತತ್ವ ಜ್ಞಾನವನ್ನು ಹುಡುಕುವರು. "ಜೀವಿಸಲು ನಮಗೆ ಒಂದೇ ಜೀವನ ಇರುವದರಿಂದ ಯಾಕೆ ಮಾಡಬಾರದು?" ಎಂದು ಅವರು ಕೇಳುವರು. ಈ ಮಾರ್ಗ ಅನುಸರಿಸುವ ಕೆಲವರು ಕೀಳು ತರಗತಿಯವರೂ ಕೆಟ್ಟು ಹೋದವರೂ ಆಗಿರುವರುಣಿ ಇತರರು ಕಾನೂನು ಪಾಲಿಸುವ ನಾಗರಿಕರಾಗಿರುವರು. ಎರಡೂ ತರಗತಿಯವರು ಭಕ್ತಿಹೀನರೂ, ದೇವರಲ್ಲಿ ನಂಬಿಕೆಯಿಲ್ಲದವರೂ ಆಗಿದ್ದಾರೆ. ನಮ್ಮ ಸುತ್ತಲೂ ಇರುವರಲ್ಲಿ ಅನೇಕರು ನಾಸ್ತಿಕರೂ ಆಗಿರುವದಿಲ್ಲ ಇಲ್ಲವೇ ಧಾರ್ಮಿಕರೂ ಆಗಿರುವದಿಲ್ಲ. ಅವರು ಸಮಾಜದ ಸಾಮಾನ್ಯ ಜನರಾಗಿದ್ದಾರೆ. ಅವರೆಂದೂ ಬೈಬಲನ್ನು ಓದುವದಿಲ್ಲ, ಮಹಾತೊಂದರೆಗಳ ಸಮಯದಲ್ಲಿ ಪ್ರಾರ್ಥಿಸುವದಿಲ್ಲ. ದೇವಾಲಯಕ್ಕೆ ಯಾವಾಗಲಾದರೊಮ್ಮೆ ಹೋಗುತ್ತಾರೆ. ವೈಯಕ್ತಿಕ ಆನಂದಕ್ಕಾಗಿ, ಮತ್ತು ಮನರಂಜನೆಗಾಗಿ ಕರ್ತನ ದಿನದಲ್ಲಿ ನಂಬಿಕೆಯಿಡುತ್ತಾರೆ. ನಾಸ್ತಿಕನು ದೇವರು ಇಲ್ಲವೆಂದು ಹೇಳುವಾಗ ಯಾರೂ ಇಲ್ಲದ ರೀತಿಯಲ್ಲಿ ಸಮೂಹಗಳು ಜೀವಿಸುತ್ತಿರುವವು. ದೇವರಿಂದ ದೂರ ಹೋಗುವ ಮಾನವ ಪ್ರಯತ್ನಗಳಿದ್ದರೂ ಇಲ್ಲವೇ ಆತನನ್ನು ಕಡೆಗಣಿಸಿದರೂ *ದೇವರು ಇನ್ನೂ ಇರುತ್ತಾನೆ.*

ಸಾಮಾನ್ಯವಾಗಿ ಜಗತ್ತು ಗಲಿಬಿಲಿಯಲ್ಲಿದೆ. ನಮ್ಮ ಸಮಸ್ಯೆಗಳು ಅವುಗಳಲ್ಲಿ ಕೆಲವನ್ನು ಭೂಲೋಕದಲ್ಲಿಯ ಅತೀ ಬುದ್ಧಿವಂತ ಜನರು ತಾವು ಅವುಗಳಿಗೆ ಉತ್ತರಕೊಡಲಾರೆವೆಂದು ಅರಿಕೆ ಮಾಡುವವರು ವರ್ಷದಿಂದ ವರ್ಷಕ್ಕೆ ಬೆಳೆಯುತ್ತ ಹೋಗುತ್ತಿದ್ದಾರೆ. ಹೀಗಿದ್ದರೂ ನಮ್ಮ ಎಲ್ಲಾ ಚಿಕ್ಕ ಹೋರಾಟಗಳ ಮತ್ತು ಜಗಳಗಳ ಧೂಳಿಗಿಂತ ಹೆಚ್ಚಾಗಿ, *ದೇವರು ಇದ್ದಾನೆ.*

ಕೀರ್ತನೆಗಾರನು ತನ್ನ ಕಷ್ಟಗಳಿಂದ ತಪ್ಪಿಸಿ ಕೊಂಡು ಹೋಗುವೆನೆಂದು ಒಂದು

ಸಲ ಯೋಚಿಸಿದನು.

> ... ಆಹಾ, ನನಗೆ ರೆಕ್ಕೆಗಳಿದ್ದರೆ,
> ಪಾರಿವಾಳದಂತೆ ಹಾರಿಹೋಗಿ ಆಶ್ರಯಸೇರಿ ಕೊಳ್ಳುತ್ತಿದ್ದೆನು.
> ಅವಸರದಿಂದ ಹಾನಿಕರವಾದ ಬಿರುಗಾಳಿಗೆ ತಪ್ಪಿಸಿಕೊಂಡು
> ದೂರ ಹೋಗಿ ಅರಣ್ಯ ಸ್ಥಳದಲ್ಲಿ ಪ್ರವಾಸಿಯಾಗಿರುತ್ತಿದ್ದೆನು
> (ಕೀರ್ತನೆ 55:6-8).

ಒಂದು ವೇಳೆ, ದಾವೀದನಿಗೆ ರೆಕ್ಕೆಗಳು ಕೊಡಲ್ಪಟ್ಟಿದ್ದರೆ, ಹಾಗೂ ಅವನು ಕಾಡಿನೊಳಗೆ ಹಾರಿ ಹೋಗಿದ್ದರೆ, ಅವನು ಇನ್ನೂ ಸಮಸ್ಯೆಗಳನ್ನು ಅನುಭವಿಸಬೇಕಿತ್ತು - ಹಾಗೂ ದೇವರು ಇನ್ನೂ ಅಲ್ಲಿರುತ್ತಿದ್ದನು. ಇದೇ ದಾವೀದನು, 139ನೆಯ ಕೀರ್ತನೆಯನ್ನು ಬರೆಯುವಲ್ಲಿ, ದೇವರ ಮಹಿಮೆಗಳ ಮೇಲೆ ಧ್ಯಾನಿಸಿದನು ಮತ್ತು ಶತಮಾನಗಳಲ್ಲಿ ಪ್ರತಿಧ್ವನಿಸುವ ರೀತಿಯಲ್ಲಿ ಆತನ ಅಪರಿಮಿತ ಮಹಿಮೆಯನ್ನು ಹಾಡಿದನು. ಅದು ಇನ್ನೂ ನಮ್ಮ ಹೃದಯಗಳನ್ನು ಸ್ಪರ್ಶಿಸುತ್ತಿರುವುದು.

ಈ ಪಾಠವು ಅಬಿಲೆನೆ ಕ್ರಿಷ್ಟಿಯನ್ ಕಾಲೇಜ್ ಭಾಷಣಗಳ, 1958 ಪುನರ್ ಮುದ್ರಣವಾಗಿದೆ. ಅಬಿಲೆನೆ ಕ್ರಿಷ್ಟಿಯನ್ ಯೂನಿವರ್ಸಿಟಿ ಲೆಕ್ಚರ್‌ಶಿಪ್ ಡೈರೆಕ್ಟರ್ ಅವರ ಅಪ್ಪಣೆಯಿಂದ ಉಪಯೋಗಿಸಲ್ಪಟ್ಟಿದೆ.